ಶ್ರೀ ಧರ್ಮಸ್ಥಳ ಕ್ಷೇತ್ರ. ಇವುಗಳ ಮಧ್ಯದಲ್ಲಿ ಒಂದು ಸೇತುವೆ ಆಗಬೇಕಾಗಿದೆ. ಆ ರಸ್ತೆ ಏನು ಚೆನ್ನಾಗಿಲ್ಲ. ಆದ್ದರಿಂದ ರಸ್ತೆಯ ವ್ಯವಸ್ಥೆ ಸರಿಯಾಗಬೇಕಾಗಿದೆ. ಇನ್ನೊಂದು ವಿಷಯ ಎಂದರೆ, ಈ ತಿಂಗಳ ಪ್ರಾರಂಭದಲ್ಲಿ ಆನೆಕಾಲು ರೋಗಕ್ಕೇ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಾತ್ರೆಗಳನ್ನು ಹಂಚಿದರು. ನಮ್ಮಲ್ಲಿ ಕೊಣಾಲು ಶಾಲೆಯ ಒಂಬತ್ತನೇ ತರಗತಿಯಲ್ಲಿ ಓದುತ್ತಿದ್ದ ಹರೀಶ್ ಎಂಬ ಪರಿಶಿಷ್ಟ ಜಾತಿಗೆ ಸೇರಿದ ಹುಡುಗ ಆ ಮಾತ್ರೆಯನ್ನು ತಿಂದು ಅಸೌಖ್ಯಗೊಂಡು ತೀರಿಕೊಂಡಿದ್ದಾನೆ. ಆ ಮನೆಯವರಿಗೆ ಸಾಂತ್ವನದ ಜತೆಗೆ ಅವರಿಗೆ ಪರಿಹಾರವಾಗಿ ಒಂದು ಲಕ್ಷ ರೂಪಾಯಿಗಳನ್ನು ಸರ್ಕಾರದಿಂದ ಒದಗಿಸಿಕೊಡಬೇಕೆಂದು ನಾನು ಮಾನ್ಯ ಅಧ್ಯಕ್ಷರ ಮುಖಾಂತರ ಸರ್ಕಾರವನ್ನು ಕೇಳಿಕೊಳ್ಳುತ್ತಿದ್ದೇನೆ.

ವಿಷಯ (ಮ) : ಸಕಲೇಶಪುರ ಕ್ಷೇತ್ರದಲ್ಲಿ ಗುಂಡ್ಯ ಮತ್ತು ಬಿಸ್ಲೆ ಅರಣ್ಯ ಸಿಬ್ಬಂದಿಗೆ ವಾಹನ ಇತ್ಯಾದಿ ಸೌಲಭ್ಯ ಒದಗಿಸುವ ಬಗ್ಗೆ

ಶ್ರೀ ಹೆಚ್.ಎಂ. ವಿಶ್ವನಾಥ್ (ಸಕಲೇಶಪುರ) : ಮಾನ್ಯ ಅಧ್ಯಕ್ಷರೇ, ಇದಕ್ಕೇ ಪೂರಕವಾಗಿ ಇನ್ನೊಂದು ಪ್ರಶ್ನೆ. ಮಾನ್ಯ ಸದಸ್ಯೆಯವರು ಏನು ಪ್ರಸ್ತಾಪ ಮಾಡಿದರು, ಅದರ ಮಗ್ಗುಲಲ್ಲಿ ನನ್ನ ಸಕಲೇಶಪುರ ಕ್ಷೇತ್ರ ಇದೆ. ಬಿಸ್ಲೆ ಅರಣ್ಯ ಮತ್ತು ಆ ಭಾಗದಲ್ಲಿ ಬರತಕ್ಕಂಥ ಏನು ಗುಂಡ್ಯ ಅರಣ್ಯ ಬರುತ್ತದೆ, ಅದರ ಒಳಗಡೆ ಭಾರಿ ದೊಡ್ಡ ಪ್ರಮಾಣದಲ್ಲಿ ಗಾಂಜಾವನ್ನು ಬೆಳೆಯುತ್ತಿದ್ದಾರೆ. ಈ ಗಾಂಜಾ ಬೆಳೆಸುವುದು ಮತ್ತು ಅಲ್ಲಿ ಆಗತಕ್ಕಂಥ ಅನೈತಿಕೆ ಚಟುವಟಿಕೆಗಳನ್ನು ನಿಲ್ಲಿಸುವುದಕ್ಕೆ ನಮ್ಮ ಇಲಾಖೆ ಸಮರ್ಥವಾಗಿಲ್ಲ. ಅದರ ಭಾಗದಲ್ಲಿ ಬರತಕ್ಕಂಥ ಎಸ್ಟನೂರು ರೇಂಜ್ ಅಂತ ಏನೊಂದು ಅರಣ್ಯ ಇಲಾಖೆಯ ರೇಂಜ್ ಇದೆ, ಅದಕ್ಕೆ ಅಗತ್ಯವಾದ ಸಿಬ್ಬಂದಿ ಇಲ್ಲ. ಜತೆಗೆ ಅಲ್ಲಿ ಒಂದು ಜೀಪು ಕೂಡ ಇಲ್ಲ. ಬಿಸ್ಲೆ ಮತ್ತು ಆ ಭಾಗದಲ್ಲಿ ಬರತಕ್ಕಂಥ ದೊಡ್ಡ ಅರಣ್ಯ ಇಡೀ ನಮ್ಮ ದೇಶದಲ್ಲೇ ಅತ್ಯುನ್ನತವಾದಂಥ ಅರಣ್ಯವಾಗಿದೆ. ಅದನ್ನು ಸಂರಕ್ಷಣೆ ಮಾಡುವುದಕ್ಕೆ ಒಂದು ಇಲಾಖೆಗೆ ಜೀಪು ಇಲ್ಲ, ಮತ್ತು ಬೇಕಾದಂಥ ಸಿಬ್ಬಂದಿಯೂ ಇಲ್ಲವೆನ್ನುವ ಕಾರಣಕ್ಕೆ ಅಲ್ಲಿ ಗಾಂಜಾ ಬೆಳೆಯುವುದನ್ನು ತಪ್ಪಿಸಲು ಮತ್ತು ಅಲ್ಲಿರತಕ್ಕಂಥ ಅತ್ಯುನ್ನತವಾದಂಥ ಬೆತ್ತ ಮತ್ತು ಶ್ರೀಗಂಧ, ಶ್ರೀಹೊನ್ನೆ ಮರಗಳನ್ನು ರಕ್ಷಣೆ ಮಾಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಆದ್ದರಿಂದ ಸರ್ಕಾರ ಕೂಡಲೇ ಅಲ್ಲಿಗೆ ಬೇಕಾದಂಥ ನಿಬ್ಬಂದಿ ಮತ್ತು ಅಗತ್ಯವಾದಂಥ ವಾಹನ ಸೌಕರ್ಯಗಳನ್ನು ಮಾಡಿಕೊಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಹಾಗು ಸಂಸದೀಯ ವ್ಯವಹಾರಗಳ ಸಚಿವರು) : ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಶಾಸಕರುಗಳಿಬ್ಬರೂ ಬಹಳ ಮುಖ್ಯವಾದ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಮಾದಕ ವಸ್ತುಗಳ ನಿಬಂಧನೆಗಳಿಗೆ ಸಂಬಂಧಪಟ್ಟಿರತಕ್ಕಂಥ Narcotics Prevention Avt ಏನಿದೆ, ಅದಕ್ಕೆ ಸಂಬಂಧಪಟ್ಟ ಸಿಬ್ಬಂದಿ ಕೊರತೆ ಬಹಳ ಇದೆ. ಗಾಂಜಾ ಬೆಳೆಯತಕ್ಕ ಪ್ರದೇಶಗಳನ್ನು ಗುರುತಿಸುವುದೂ ಕೂಡ ಬಹಳ ಕಷ್ಟ ಆಗುತ್ತಿದೆ. ಆದರೂ ಕೂಡ ಆ ದಟ್ಟ ಅರಣ್ಯದ ಒಳಗಡೆಗೆ ಬೆಳೆಯತಕ್ಕಂಥ ಮಾದಕ ವಸ್ತುಗಳು, ಗಾಂಜಾ ಮೊದಲಾದುದನ್ನು ನಿಷೇಧಿಸುವುದಕ್ಕೆ ಕ್ರಮ ಕೈಗೊಳ್ಳಬೇಕಾಗಿದೆ. ಅದಕ್ಕೆ ತಾವು ಒಳ್ಳೆಯ ಸಲಹೆಯನ್ನು ಕೊಟ್ಟಿದ್ದೀರಿ. ಸರ್ಕಾರ ಈ ಬಗ್ಗೆ ಗಮನವನ್ನು ಕೊಡುತ್ತದೆ. ಈಗ ಭಾರತ ದೇಶ ಸುದೈವವಶಾತ್ it is only a peddler state ಎಂದು ಕರೆಯುತ್ತಾರೆ. ಅಫ್‌ಘಾನಿಸ್ತಾನ ಮೊದಲಾದಂಥ ಅದರಲ್ಲಿ ಬರ್ಮಾ ಕಡೆಯಿಂದ ಇಂತಹ ಮಾದಕ ವಸ್ತುಗಳು ಬಹಳ ಬರುತ್ತವೆ. ಈ ಮಾರ್ಗದಿಂದ ಬೇರೆ ಕಡೆಗೆ ಹೋಗುತ್ತವೆ. ಇದು ಇನ್ನೂ ಕನ್‌ಸ್ಯೂಮರ್ ಸ್ಟೇಟ್ ಆಗಿಲ್ಲ. ಬಳಸತಕ್ಕ ಉದ್ದೇಶ ಇನ್ನೂ ಆಗಿಲ್ಲ. ಆದರೆ, ಅದನ್ನು ಬೆಳೆಯತಕ್ಕಂಥ

ದೇಶ ಆಗಿದೆ. ಅದನ್ನು ನಾವು ನಿಲ್ಲಿಸಬೇಕಾದಂಥ ತಮ್ಮ ಸಲಹೆ ಏನಿದೆ, ಅದಕ್ಕೆ ನಾನು ಒತ್ತುಕೊಡುತ್ತೇನೆ. ತಾವು ಬೇರೆ ಬೇರೆ ವಿಷಯಗಳನ್ನೂ ಪ್ರಸ್ತಾಪ ಮಾಡಿದ್ದೀರಿ. ಆಯುರ್ವೇದ ಗಿಡಮೂಲಿಕೆಗಳನ್ನು ಬೆಳೆಸುವುದಕ್ಕೆ ವ್ಯಾಪಕವಾಗಿ, ಕೇರಳದಲ್ಲಿ ಏನಿದೆಯೋ ಆ ತರಹದ ಉತ್ತೇಜನ ಕ್ರಮಗಳನ್ನು ನಮ್ಮ ಭಾರತೀಯ ವೈದ್ಯ ಪದ್ಧತಿ ಮಂಡಳಿಯವರೂ ಕೂಡ ಕ್ರಮ ಕೈಗೊಳ್ಳುತ್ತಾರೆ. ಈ ಬಗ್ಗೆ ತಮ್ಮ ಸಲಹೆಯನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿ, ಸೂಕ್ತ ಪ್ರತಿಕ್ರಿಯೆಯನ್ನು ಮಾಡುತ್ತದೆ.

3. ನಿಯಮ 69ರ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಬಗ್ಗೆ ಅಲ್ಪ ಕಾಲಾವಧಿ ಚರ್ಚೆ:

ವಿಷಯ (ಅ) : ರಾಜ್ಯಾದ್ಯಂತ ಶಾಲಾ ಕಾಲೇಜುಗಳಿಗೆ ಪ್ರವೇಶ ಕೋರಿರುವ ವಿದ್ಯಾರ್ಥಿಗಳಿಗೆ ಶಿಕ್ಷಣ ಸಂಸ್ಥೆಗಳಿಂದ ಉಂಟಾಗುತ್ತಿರುವ ತೊಂದರೆಯ ಬಗ್ಗೆ

†ಶ್ರೀ ನೆ.ಲ. ನರೇಂದ್ರಬಾಬು (ರಾಜಾಜಿನಗರ) : ಸನ್ಮಾನ್ಯ ಅಧ್ಯಕ್ಷರೇ, ಇವತ್ತು ಯಾವ ವಿಷಯದ ಬಗ್ಗೆ ನಾನು ಈ ಸದನದ ಗಮನ ಸೆಳೆಯಬಯಸುತ್ತೇನೆ ಎಂದರೆ, ಸಂವಿಧಾನ ದತ್ತವಾಗಿ ಈ ದೇಶದ ಪ್ರತಿಯೊಬ್ಬ, 14 ವರ್ಷದ ಕೆಳಗಡೆ ಇರತಕ್ಕ ಮಗುವಿಗೆ ಕಡ್ಡಾಯವಾಗಿ ಪ್ರಾಥಮಿಕ ಶಿಕ್ಷಣವನ್ನು ಕೊಡಬೇಕು ಎನ್ನತಕ್ಕಂಥಾದ್ದು ಸ್ವತಂತ್ರ ಭಾರತದ ಪ್ರತಿಯೊಬ್ಬರ ಬಯಕೆ. ಹಾಗೂ ಸಂವಿಧಾನ ದತ್ತವಾಗಿ ಅದನ್ನು ನಾವು ಒಪ್ಪಿಕೊಂಡಿದ್ದೇವದೆ. ಅದು ಅನುಷ್ಠಾನ ಆಗಬೇಕಾಗಿದೆ. ಇವತ್ತು ರಾಜ್ಯಾದ್ಯಂತ ಶಾಲಾ ಕಾಲೇಜುಗಳು ಆರಂಭವಾದ ದಿನಗಳಲ್ಲಿ ಪ್ರತಿಯೊಬ್ಬ ಪೋಷಕರಿಗೆ ಅಗತಕ್ಕಂಥ ಆ ವೇದನೆ, ಹೇಳತೀರದು ಶಾಲಾ ಕಾಲೇಜುಗಳ ಅಡ್ಮಿಷನ್. ಅದು ಎಲ್.ಕೆ.ಜಿ. ಇರಬಹುದು ಅಥವಾ ಒಂದನೇ ತರಗತಿ ಇರಬಹುದು, ಎಂಟನೇ ತರಗತಿ ಇರಬಹುದು ಅಥವಾ ಹತ್ತನೇ ತರಗತಿ ಪಾಸಾಸ ನಂತರ ಪ್ರಥಮ ಪಿ.ಯು.ಸಿ.ಗೆ ಪ್ರವೇಶ ದೊರತಕ್ಕಂಥಾದ್ದು ಇರಬಹುದು. ಅಥವಾ ಪಿ.ಯು.ಸಿ ಪಾಸಾದ ಮೇಲೆ ವೃತ್ತಿನಿರತ ಪ್ರೊಫೆಷನಲ್ ಕೋರ್ಸ್ ಇರಬಹುದು. ಶಿಕ್ಷಣ ಸಂಸ್ಥೆಗಳಲ್ಲಿ ಪ್ರವೇಶ ನೀಡತಕ್ಕಂಥ ಸಂದರ್ಭದಗಳಲ್ಲಿ, ಬೆಂಗಳೂರು ನಗರದಲ್ಲೇ ಅಲ್ಲ. ನನಗೆ ಗೊತ್ತಿರುವಹಾಗೆ ಬಹುತೇಕ ಎಲ್ಲಾ ನಗರಗಳಲ್ಲಿ, ಎಲ್ಲಾ ವಿಧಾನ ಸಭಾ ಕ್ಷೇತ್ರಗಳಲ್ಲಿ ಇವತ್ತು ಈ ಶೋಷಣೆಯನ್ನು, ತೊಂದರೆಯನ್ನು ಪೋಷಕರು, ವಿದ್ಯಾರ್ಥಿಗಳು ಅನುಭವಿಸುತ್ತಿದ್ದಾರೆ. ಈ ಸಂದರ್ಭದಲ್ಲಿ ಪ್ರತಿಯೊಬ್ಬ ಪೋಷಕರಿಗೂ ಸಹ ಅಗತಕ್ಕ ವೇದನೆ ಅಥವಾ ನೋವನ್ನು, ಬಹುಶಃ ಎಲ್ಲಾ ಕಡೆ ಸರ್ಕಾರಗಳಲ್ಲಿ ಇದಕ್ಕೆ ಒಂದು ಕಮಿಟಿ ಇದ್ದರೂ ಸಹ ಹೇಳಿಕೊಳ್ಳುವುದಕ್ಕಾಗದೇ ಅವರ ಅಳಲನ್ನು ಹಲವಾರು ಸಂದರ್ಭದಲ್ಲಿ ನಮ್ಮ ಮುಂದೆ ತೋಡಿಕೊಂಡಿರುವುದನ್ನು ಕಳೆದ 15 ವರ್ಷಗಳಿಂದ ನಾನು ಕಂಡಿದ್ದೇನೆ. ಇವತ್ತು ಸ್ವತಂತ್ರ ಭಾರತದಲ್ಲಿ ಪಂಡಿತ್ ಜನಹರ ಲಾಲ್ ನೆಹರೂರವರು ಒಂದು ಮಾತು ಹೇಳುತ್ತಾರೆ. ``Schools and colleges are modern temples of free India." ಎಂದು ಆದರೆ, ಇವತ್ತು ಶಾಲೆ ಮತ್ತು ಕಾಲೇಜು ಕೆಲವರಿಗೆ ಒಂದು ರೀತಿಯಲ್ಲಿ ಹಣವನ್ನು ಸಂಪಾದನೆ ಮಾಡುವ ಮಾರ್ಗವಾಗಿದೆ. ಬಹಳ ನೊಂದು, ನಾನೊಬ್ಬ ಯುವಕನಾಗಿ ಈ ಮಾತನ್ನು ಹೇಳುತ್ತೇನೆ. ಇವತ್ತು ನನಗೆ ವಿಶೇಷವಾದ ಗೌರವ ಇದೆ. ರಾಜ್ಯದಲ್ಲಿ ಬಹಳಷ್ಟು ಶಿಕ್ಷಣ ಸಂಸ್ಥೆಗಳು ಸೇವಾ ಮನೋಭಾವನೆಯಿಂದ ಕೆಲಸ ಮಾಡುತ್ತಿದೆ. ಆದರೆ, ಕೆಲವು ಶಿಕ್ಷಣ ಸಂಸ್ಥೆಗಳು ಇದನ್ನೇ ಒಂದು ಮಾರ್ಗವನ್ನಾಗಿ ಇಟ್ಟುಕೊಂಡು ಪ್ರಾಥಮಿಕ ಶಿಕ್ಷಣಕ್ಕೂ ಸಹ, ಮಕ್ಕಳಿಗೆ ವಿದ್ಯಾಭ್ಯಾಸ ಕೊಡುವ ದಿಕ್ಕಿನಲ್ಲಿ ಪೋಷಕರು ಮುಂದಾದಾಗ ವಿಶೇಷವಾಗಿ ಬಡವರು, ಪರಿಶಿಷ್ಟವರ್ಗದವರು, ಹಿಂದುಳಿದವರು ಆರ್ಥಿಕವಾಗಿ ಹಿಂದುಳಿದವರು ಶಿಕ್ಷಣ ಸಂಸ್ಥೆಗಳಿಗೆ ಇವತ್ತು ಹಣ ಇಲ್ಲದೇಹೋದರೆ ಪ್ರವೇಶ ಇಲ್ಲ ಎನ್ನತಕ್ಕ ರೀತಿಯ ಧೋರಣೆಯನ್ನು